# ನಿಜವಾದ ಪವಾಡ



ಪ್ರಸಿದ್ಧ ಧರ್ಮೋಪದೇಶಕನೂ ವಿದ್ವಾಂಸನೂ ಆದ ಹಸನ್ ಬಸರೀ ಒಮ್ಮೆ ಸ್ತ್ರೀಸಂತಳಾದ ರಬಿಯಾಳನ್ನು ಭೇಟಿಯಾಗಲು ಬಂದನು. ಆಗ ಆಕೆ ಒಂದು ನದೀತಟದಲ್ಲಿ ತಂಗಿದ್ದಳು. ಇಬ್ಬರೂ ಮಾತನಾಡುತ್ತಿದ್ದಂತೆ ನಮಾಜ್ ಮಾಡುವ ಸಮಯ ಬಂದಿತು. ಹಸನ್ ತನ್ನ ಆಸನವನ್ನು ನದಿಯ ನೀರಿನ ಮೇಲೆ ಹಾಕಿಕೊಂಡು ಅದರ ಮೇಲೆ ನಮಾಜ್‌ಗೆ ಕುಳಿತನು, ಮತ್ತು ರಬಿಯಾಳಿಗೆ ನಮಾಜ್ ಪ್ರಾರ್ಥನೆಯನ್ನು ಪಠಿಸಲು ಹೇಳಿದನು. ಆಗ ರಬಿಯಾ ತನ್ನ ಆಸನವನ್ನು ಮೇಲೆ ಗಾಳಿಯಲ್ಲೇ ಹಾಕುತ್ತಾ ಹೇಳಿದಳು : "ನಾನು ಕೆಳಗೆ ಓದುವುದಿಲ್ಲ. ಮೇಲಿನಿಂದಲೆ ಓದುತ್ತೇನೆ. ಅಲ್ಲಿಂದ ಯಾರೂ ನಮ್ಮನ್ನು ನೋಡಲಾರರು." ಇದನ್ನು ನೋಡಿ ಹಸನ್‌ಗೆ ಆಶ್ಚರ್ಯವಾಯಿತು. ಕಾರಣ ನೀರಿನ ಮೇಲೆ ಹಾಕಿದ ಅವನ ಆಸನ ಸ್ಥಿರವಾಗಿತ್ತು, ಆದರೆ ರಬಿಯಾಳ ಆಸನ ಗಾಳಿಯಲ್ಲಿ ತೇಲುತ್ತಿತ್ತು. ಹಸನ್ ಬಹಳ ದುಃಖಿತನಾದ, ರಬಿಯಾಳಂತೆ ತನ್ನ ಆಸನವನ್ನೂ ಗಾಳಿಯಲ್ಲೇ ಹಾಕುವ ಶಕ್ತಿ ತನಗಿಲ್ಲವಲ್ಲ ಎಂದು ಅವನಿಗೆ ವ್ಯಥೆಯಾಯಿತು. ರಬಿಯಾ ಆಗ ಆತನ ದುಃಖವನ್ನು ಕಂಡು ಹೇಳಿದಳು. "ನೋಡು ಹಸನ್, ನೀನು ಮಾಡಿದ ಚಮತ್ಕಾರವನ್ನು ಒಂದು ಮೀನು ಸಹ ಮಾಡಬಲ್ಲದು. ನಾನು ಮಾಡಿದ್ದನ್ನು ಒಂದು ಪಕ್ಷಿ ಕೂಡ ಮಾಡಬಲ್ಲುದು. ಇವೆರಡನ್ನೂ ನಾವು ಮಾಡಬೇಕಾಗಿಲ್ಲ. ನಾವು ಮಾಡಬೇಕಾದ್ದು—ನೀನು ಮಾಡಿದಂತೆಯೂ ಅಲ್ಲ, ನಾನು ಮಾಡಿದಂತೆಯೂ ಅಲ್ಲ—ಇವೆರಡಕ್ಕಿಂತಲೂ ಭಿನ್ನವಾಗಿದೆ; ಅದು ಜನಸಾಧಾರಣರನ್ನು ಮೇಲಕ್ಕೆತ್ತುವುದಾಗಿದೆ."

ಈ ಮಾತಿನಿಂದ ಹಸನ್‌ಗೆ ಜ್ಞಾನೋದಯವಾಯಿತು. ಸಾಧುಸಂತರು ಜನರಿಗೆ ಪವಾಡಗಳನ್ನು ತೋರಿಸಲೋಸುಗ ಅವುಗಳ ಬೆಂಬತ್ತಿ ಹೋಗಬಾರದು. ಬದಲಾಗಿ ಜನತೆಯನ್ನು ಹೆಚ್ಚು ಹೆಚ್ಚು ಆಧ್ಯಾತ್ಮಿಕ ಮಾರ್ಗದಲ್ಲಿ ತರುವ ಕಡೆ ವಿಶೇಷವಾದ ಗಮನ ಕೊಡಬೇಕು. ಇದರಿಂದಲೇ ಜೀವನ ಸಾರ್ಥಕವಾಗುವುದು. ◆